# ಪಿ.ಬಿ. ದುತ್ತರಗಿ ಅವರ ತಾಯಿಯ ಕರುಳು ನಾಟಕದಲ್ಲಿ: ಸ್ತ್ರೀ ಸಂವೇದನೆ

**ಕಾಳಮ್ಮ**[*]

**DOI: https://doi.org/10.5281/zenodo.20614294**

**ABSTRACT**

ವೃತ್ತಿರಂಗಭೂಮಿಯ ದಿಗ್ಗಜ ಪಿ.ಬಿ. ದುತ್ತರಗಿ ಅವರ 'ತಾಯಿಯ ಕರುಳು' ನಾಟಕವು ಪಿತೃಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರ ಮೇಲಿರುವ ಸಾಮಾಜಿಕ ದೃಷ್ಟಿಕೋನಗಳನ್ನು ಹಾಗೂ ಸ್ತ್ರೀ ಸಂವೇದನೆಯನ್ನು ಅತ್ಯಂತ ಸೂಕ್ಷ್ಮವಾಗಿ ಅನಾವರಣಗೊಳಿಸುತ್ತದೆ. ಸಮಾಜವು ಹೆಣ್ಣನ್ನು ಎಲ್ಲವನ್ನೂ ಮೌನವಾಗಿ ಸಹಿಸಿಕೊಳ್ಳುವ ತ್ಯಾಗಮಯಿ 'ತಾಯಿ' ಎಂದು ಆದರ್ಶೀಕರಿಸುತ್ತದೆ, ಇಲ್ಲವೇ ತನ್ನ ಹಕ್ಕುಗಳಿಗಾಗಿ, ಅಧಿಕಾರಕ್ಕಾಗಿ ಧ್ವನಿಯೆತ್ತುವಾಗ ಆಕೆಗೆ 'ಗಯ್ಯಾಳಿ' ಎಂದು ಹಣೆಪಟ್ಟಿ ಕಟ್ಟುತ್ತದೆ. ಈ ಎರಡೂ ಪರಸ್ಪರ ವಿರೋಧಿ ನೆಲೆಗಳ ಮೂಲಕ, ಪುರುಷಕೇಂದ್ರಿತ ಸಮಾಜವು ಮಹಿಳೆಯನ್ನು ಹೇಗೆ ತನ್ನ ಅನುಕೂಲಕ್ಕೆ ತಕ್ಕಂತೆ ನಿಯಂತ್ರಿಸುತ್ತದೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಅತ್ತೆ–ಸೊಸೆಯ ಸಂಘರ್ಷದ ಹಿನ್ನೆಲೆಯಲ್ಲಿ, ಮನೆಯೊಳಗಿನ ಅಧಿಕಾರ ಹಂಚಿಕೆಯ ಕೊರತೆ ಮತ್ತು ಸಾಮಾಜಿಕ ಒತ್ತಡಗಳನ್ನು ನಾಟಕಕಾರರು ಎತ್ತಿತೋರಿಸಿದ್ದಾರೆ. ಅಂತಿಮವಾಗಿ, ಮಹಿಳೆಯನ್ನು ಕೇವಲ ಸಹನಶೀಲೆ ಅಥವಾ ಗಯ್ಯಾಳಿ ಎಂಬ ಸೀಮಿತ ವರ್ಗೀಕರಣದ ಚೌಕಟ್ಟಿಗೆ ಒಳಪಡಿಸದೆ, ಆಕೆಗೂ ತನ್ನದೇ ಆದ ಸ್ವತಂತ್ರ ಅಸ್ತಿತ್ವ ಮತ್ತು ಮಾನವೀಯ ಭಾವನೆಗಳಿರುವುದನ್ನು ತೆರೆದಿಡುವ ಮಹತ್ವದ ಆಶಯವನ್ನು ಮಂಡಿಸಲಾಗಿದೆ.

**KEYWORDS:** ಸ್ತ್ರೀ ಸಂವೇದನೆ, ಪಿ.ಬಿ. ದುತ್ತರಗಿ, ಪಿತೃಪ್ರಧಾನ ಸಮಾಜ, ತಾಯಿಯ ಕರುಳು ನಾಟಕ, ವೃತ್ತಿ ರಂಗಭೂಮಿ.

* **ಡಾ. ಕಾಳಮ್ಮ**, ಉಪನ್ಯಾಸಕರು, ಕೊಪ್ಪಳ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ.

ಒಂದು ಪುಸ್ತಕ ಮಾಡುವುದಕ್ಕಿಂತ ನೂರು ಪಾಲು ಹೆಚ್ಚಿನ ಸಾಧನೆಯನ್ನು ನಾಟಕ ಮಾಡಬಲ್ಲದುದಾಗಿದೆ ಪ್ರದರ್ಶಕ ಗುಣದ ಆಸ್ವಾದನೀಯ ಅಂಶಗಳಿಂದಾಗಿ "ಕಾವ್ಯೇಷು ನಾಟಕಂ ರಮ್ಯಂ" ಎನಿಸಿಕೊಳ್ಳುತ್ತದೆ. ಅದು ಪ್ರತಿ ಕ್ರಿಯಾತ್ಮಕ ಸಂವಹನೆಯ ದೃಷ್ಟಿಯಿಂದ ನಿಜವೂ ಹೌದು. ನಾಟಕ ವ್ಯಕ್ತಿ ವ್ಯಕ್ತಿಗಳ ನಡುವಿನ ನೇರ ಸಂವಹನೆ ವೇದಿಕೆಯ ಮೇಲೆ ನಟ ನುಡಿಯುವ ಸಂಭಾಷಣೆಗೆ ವೇದಿಕೆ ಕೆಳಗೆ ಕುಳಿತ ಪ್ರೇಕ್ಷಕ ಕೂಡಲೇ ಚಪ್ಪಾಳೆ ತಟ್ಟಿ ಸೀಟಿ ಹೊಡೆದು ತಮ್ಮ ಸಂತಸ ವ್ಯಕ್ತಪಡಿಸುತ್ತಾರೆ.

ಸಿನಿಮಾ ರೇಡಿಯೋ ದೂರದರ್ಶನ ಮುಂತಾದ ಆಧುನಿಕ ಮಾಧ್ಯಮಗಳು ಯಾವುದೇ ಬರಲಿ ಅವುಗಳು ಒಡ್ಡುವ ಆಕರ್ಷಣೆ ಎಷ್ಟೇ ಉತ್ಕಟವಾಗಿರಲಿ ರಂಗಭೂಮಿಗೆ ಇರುವ ಶಕ್ತಿ ಬಹುದೊಡ್ಡದು ನಾಟಕದಲ್ಲಿ ಸಾಮೂಹಿಕ ರಂಜನಾ ಸಾಮರ್ಥ್ಯವಿದೆ, ಒಂದು ನಾಡಿನ ಭಾಷಾ ಜೀವನ ಹಾಗೂ ಅಂತಃಸತ್ವದ ಚಿತ್ರಣವಿದೆ, ಸಮಾಜ ಧರ್ಮದ ವಿವೇಚನೆ ಇದೆ, ಸಮಾಜದಲ್ಲಿನ ವಿಷಮತೆಯನ್ನು ನಿವಾರಿಸುವ ಮಾರ್ಗ ನಿರೂಪಣೆ ಇದೆ.

ಜಾನಪದ ರಂಗಭೂಮಿಯ ತಳಹದಿಯ ಮೇಲೆ ಹುಟ್ಟಿಕೊಂಡ ನೃತ್ಯ ರಂಗಭೂಮಿಯು ಹಾಗೂ ಹವ್ಯಾಸ ರಂಗಭೂಮಿ ನಾಟಕವನ್ನು ವೃತ್ತಿಯಾಗಿಸಿಕೊಂಡು ತಂಡ ಮಂಡಳಿಗಳನ್ನು ರಚಿಸಿಕೊಂಡು ಜೀವನೋಪಾಯಕ್ಕಾಗಿ ಅದನ್ನೇ ಅವಲಂಬಿಸಿದ ಪ್ರದರ್ಶನ ಕಲೆ ವೃತ್ತಿರಂಗಭೂಮಿ. ಇದು ವ್ಯಾಪಾರಿ ರಂಗಭೂಮಿ ಇದನ್ನು ಮಾಡರ್ನ್ ಥಿಯೇಟರ್ ಎಂದು ಕರೆಯುವುದುಂಟು.

ಹಾಗೆ ನೋಡಿದರೆ ವೃತ್ತಿ ರಂಗಕಲೆ ತೀರಾ ಹಳೆಯದಲ್ಲ ಭಾರತದಲ್ಲಿ ವೃತ್ತಿಪರ ನಾಟಕ ಮಂಡಳಿ ಮೊದಲು ಚಿಗುರಿದ್ದು ಕಲ್ಕತ್ತಾದಲ್ಲಿ. ಉತ್ತರ ಕರ್ನಾಟಕದ ಭಾಗದಲ್ಲಿ ಮರಾಠಿ ನಾಟಕಗಳ ಪ್ರಭಾವದಿಂದ ಕರ್ನಾಟಕದಲ್ಲಿ ವೃತ್ತಿ ರಂಗಭೂಮಿ ಹುಟ್ಟಿಕೊಂಡಿತು. ಕನ್ನಡ ರಂಗಭೂಮಿಯ ತಾಯಿ ಬೇರು ಕಂಡು ಬಂದಿದೆ. ಕರ್ನಾಟಕದ ವೃತ್ತಿರಂಗಭೂಮಿಗೆ ಹಲವಾರು ಅಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ ಅವರಲ್ಲಿ ಪ್ರಮುಖರಾಗಿ ನಿಲ್ಲುವವರಲ್ಲಿ ಪಿ.ಬಿ.ದುತ್ತರಗಿ (ಪುಂಡಲೀಕಗೌಡ ಬಸವನಗೌಡ ದುತ್ತರಗಿ) ಅವರು ನಮ್ಮ ನಾಡು ಕಂಡ ಮಹಾನ್ ಚೇತನ.

ಕನ್ನಡ ವೃತ್ತಿರಂಗಭೂಮಿಯ ಪ್ರಮುಖ ನಟ ನಾಟಕಕಾರ ವೃತ್ತಿ ನಿರ್ದೇಶಕ ಆಗಿ ಹಲವು ನಾಟಕಗಳನ್ನು ರೂಪಿಸಿದ್ದಾರೆ. ಪಿ.ಬಿ.ದುತ್ತರಗಿ ಅವರ ರಚನೆಗಳಲ್ಲಿ ಸಾಮಾಜಿಕ ಪರಿವರ್ತನೆಯ ವಸ್ತು ಇರುವ ಪ್ರಮುಖ ನಾಟಕಗಳು ರಚನೆಗೊಂಡಿದೆ. ಬಹಳ ಮುಖ್ಯವಾಗಿ ಸಂಪತ್ತಿಗೆ ಸವಾಲು, ಮದುಮಗಳು, ಸೊಸೆ ತಂದ ಸೌಭಾಗ್ಯ ಹೀಗೆ ಹಲವು ನಾಟಕಗಳನ್ನು ರಚಿಸಿದ್ದಾರೆ.

ಬಡತನದ ನಡುವೆ ಬೆಳೆದ ದುತ್ತರಗಿ ಅವರು ಔಪಚಾರಿಕ ಶಿಕ್ಷಣ ಪಡೆಯದಿದ್ದರೂ ಜೀವನ ಅನುಭವಗಳ ಮೂಲಕ ರಂಗಭೂಮಿಯಲ್ಲಿ ಐದು ದಶಕಗಳ ಸೇವೆ ಸಲ್ಲಿಸಿದ್ದಾರೆ. ಉತ್ತರ ಕರ್ನಾಟಕದಲ್ಲಿ ಹಲವು ನಾಟಕ ಕಂಪನಿಗಳು

ನಷ್ಟದಲ್ಲಿದ್ದಾಗ ಪಿ.ಬಿ.ದುತ್ತರಗಿ ಅವರು ರಚಿಸಿದ ನಾಟಕಗಳನ್ನು ಪ್ರದರ್ಶನಕ್ಕೆ ಆಯ್ದುಕೊಂಡು ಪುನರ್ ಜೀವನ ಕಂಡುಕೊಳ್ಳುತ್ತಿದ್ದವು. ಸಮಾಜಕ್ಕೆ ತಲುಪಿಸಬೇಕಾದ ವಿಷಯವನ್ನು ನೈಜತೆಗೆ ಸವಾಲ್ ಎಸೆಯುವಂತೆ ರಂಗದ ಮೇಲೆ ಪ್ರದರ್ಶಿಸಿದಾಗ ಮಾತ್ರ ಅದು ಜನರಿಗೆ ಮುಟ್ಟಲು ಸಾಧ್ಯ, ಬದುಕಿನ ಆಯಾಮಗಳನ್ನು ಸಾಮಾಜಿಕ ಸಂದೇಶಗಳನ್ನು ರಂಗದ ಮೂಲಕ ಮನೋಜ್ಞವಾಗಿ ಅಭಿನಯಿಸುವಂತೆ ಹಲವು ನಾಟಕಗಳನ್ನು ರಚಿಸಿದ್ದಾರೆ. ನಾಟಕದ ಮೂಲಕ ಕಲಾ ಮೌಲ್ಯ ಮತ್ತು ಜೀವನ ಮೌಲ್ಯಗಳು ಕಾಯಕಕ್ಕೆ ಪಾವಿತ್ರ್ಯವನ್ನು ತಂದುಕೊಡುವಲ್ಲಿ ಇವರು ಶ್ರೇಷ್ಠ ನಿಷ್ಠೆಯ ಸೇವೆ ಸಲ್ಲಿಸಿದ್ದಾರೆ. ಆದುದರಿಂದಲೇ ಪಿ.ಬಿ.ದುತ್ತರಗಿ ಅವರನ್ನು ಹಿರಿಯ ಸಾಹಿತಿಗಳು ರಂಗಭೂಮಿಯ ಅನರ್ಘ್ಯರತ್ನ ಎಂದು ಕರೆದಿದ್ದಾರೆ. ಸಮಾಜಮುಖಿ ಸಂದೇಶಗಳು ಸಾರುವ ಜೊತೆಗೆ ಸಮಾಜದ ಸಮಸ್ಯೆಗಳನ್ನು ಜನರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಅವರ ನಾಟಕ ರಚನೆ ಮತ್ತು ಅಭಿನಯ ಮಹತ್ವವನ್ನ ಪಡೆದಿವೆ ಆದುದರಿಂದಲೇ ಇವರಿಗೆ ಗುಬ್ಬಿ ವೀರಣ್ಣ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳು ಸಂದಿವೆ.

ಪ್ರಸ್ತುತ ಲೇಖನದಲ್ಲಿ ಪಿ.ಬಿ.ದುತ್ತರಗಿಯವರು ರಚಿಸಿರುವ ತಾಯಿಯ ಕರುಳು ನಾಟಕದ ಮೂಲಕ ಪುರುಷ ಪ್ರಧಾನ ಸಮಾಜದ ಮಹಿಳೆಯನ್ನು ನೋಡುವ ಎರಡು ಪರಸ್ಪರ ವಿರೋಧಿ ದೃಷ್ಟಿಕೋನಗಳನ್ನ ವಿಶ್ಲೇಷಿಸುವ ಅಂಶಗಳ ಬಗೆಗೆ ಚರ್ಚಿಸುತ್ತದೆ. ಸಮಾಜವೂ ಮಹಿಳೆಯನ್ನು ಒಂದು ದೇವತೆಯ ಸ್ಥಾನದಲ್ಲಿ ನಿಲ್ಲಿಸುತ್ತದೆ ಅಥವಾ ಗಯ್ಯಾಳಿ ಎಂದು ಹಣೆಪಟ್ಟಿ ಹಚ್ಚುತ್ತದೆ. ವರ್ಗೀಕರಣದ ಹಿಂದಿರುವ ಸಾಮಾಜಿಕ ಪಿತೃ ಪ್ರಧಾನ ಮನಸ್ಥಿತಿಯನ್ನ ಪಿ.ಬಿ.ದುತ್ತರಗಿ ಅವರು ತಾಯಿಯ ಕರುಳು ನಾಟಕದ ಮೂಲಕ ಸಮಾಜದ ಮುಂದಿಡುವ ಕೆಲಸವನ್ನು ಮಾಡುತ್ತಾರೆ.

ಆದರೆ ನಾಟಕದಲ್ಲಿ ಅವರು ಆದರ್ಶೀಕರಣ ಬಲೆ (ಸಹನಶೀಲತೆಯ ಹಣೆಪಟ್ಟಿ) ಪುರುಷ ಪ್ರಧಾನ ಸಮಾಜವು ಮಹಿಳೆಯಿಂದ ಯಾವಾಗಲೂ ತ್ಯಾಗ ಮತ್ತು ಸಹನೆಯನ್ನು ನಿರೀಕ್ಷಿಸುತ್ತದೆ, ಮಹಿಳೆ ಎಲ್ಲವನ್ನು ಸಹಿಸಿಕೊಂಡು ಕುಟುಂಬಕ್ಕಾಗಿ ತನ್ನನ್ನು ತಾನು ಅರ್ಪಿಸಿಕೊಂಡರೆ ಮಾತ್ರ ಅವಳನ್ನು ಆದರ್ಶ ಮಹಿಳೆ ಅಥವಾ ತಾಯಿ ಎಂದು ಗೌರವಿಸುತ್ತದೆ. ತಾಯಿಯ ಕರುಳು ನಾಟಕದಲ್ಲಿ ಬರುವ ತಾಯಿಯನ್ನು ಸಮಾಜ ಬಯಸುವ ಈ ಆದರ್ಶ ತತ್ವಗಳ ಆಧಾರದ ಮೂಲಕ ಈ ಪಾತ್ರವನ್ನು ಪಿ.ಬಿ.ದುತ್ತರಗಿಯವರು ನಿರೂಪಿಸುತ್ತಾರೆ.

ಪಿತೃ ಪ್ರಧಾನ ಸಮಾಜವು ತನ್ನ ಅನುಕೂಲತೆಗೆ ತಕ್ಕಂತೆ ಹೆಣ್ಣಿನ ನಡವಳಿಕೆಯನ್ನು ವಿಶ್ಲೇಷಿಸುತ್ತದೆ. ಸಹನೆಯ ಹೆಸರಿನಲ್ಲಿ (ಸಹನಶೀಲತೆ) ಮಹಿಳೆಯ ಮೇಲೆ ಹೇರಿ ಅವಳ ನೋವು ಮತ್ತು ವೈಯಕ್ತಿಕ ಇಚ್ಛೆಗಳನ್ನು ಅಡಗಿಸುವಂತೆ ಮಾಡುತ್ತದೆ. ತಾಯಿಯ ಪಾತ್ರವೂ ಎಲ್ಲವನ್ನು ಸಹಿಸಿಕೊಳ್ಳುವುದು ಸಮಾಜಕ್ಕೆ ಧನ್ಯತೆಯ ಕಂಡರೂ ಅದು ವಾಸ್ತವದಲ್ಲಿ ಅವಳ ಮೌನ ಸಂಕಟವಾಗುತ್ತದೆ.

ತ್ಯಾಗ ಮತ್ತು ತಾಳ್ಮೆಗಳೆಂಬ ಆದರ್ಶದ ಮೂಲಕ ತಾಯಿಯ ಪಾತ್ರವೂ ತನ್ನ ಮಕ್ಕಳ ಸುಖಕ್ಕಾಗಿ ತನ್ನ ಆಸೆ ಆಕಾಂಕ್ಷೆಗಳನ್ನು ಬಲಿಕೊಡುತ್ತದೆ. ಎಷ್ಟೇ ಕಷ್ಟಗಳು ಬಂದರೂ ಮಕ್ಕಳಿಂದ ತಿರಸ್ಕಾರ ಎದುರಾದರೂ ಅವಳು ಮೌನವಾಗಿ ಸಹಿಸಿಕೊಳ್ಳುತ್ತಾಳೆ. ಈ ಸಮಾಜ ಹೆಣ್ಣಿಗೆ ಕ್ಷಮಾಗುಣ ಎಂಬುದನ್ನು ಹೊರಿಸಿದೆ. ಮಕ್ಕಳು ತಪ್ಪು ಮಾಡಿದಾಗ ಅಥವಾ ಅವಳನ್ನ ನಿರ್ಲಕ್ಷಿಸಿದಾಗಲೂ ದ್ವೇಷ ಸಾಧಿಸದೆ ತನ್ನ ಕರುಳಿನ ಬಳ್ಳಿಯ ಪ್ರೀತಿಯಿಂದ ಅವರನ್ನ ಕ್ಷಮಿಸುವ ಗುಣ ಇಲ್ಲಿ ಎದ್ದು ಕಾಣುತ್ತದೆ. ಕುಟುಂಬದ ಆಧಾರ ಸ್ತಂಭವಾಗಿ ಹೆಣ್ಣನ್ನು ರೂಪಿಸಲಾಗಿದೆ. ಅಂದರೆ ಸಂಕಷ್ಟದ ಸಮಯದಲ್ಲಿ ಇಡೀ ಕುಟುಂಬವನ್ನ ಒಗ್ಗೂಡಿಸಲು ಅವಳು ಪಡುವ ಶ್ರಮ ಅವಳನ್ನು ಸಹನಶೀಲತೆಯ ಸಾಕಾರ ಮೂರ್ತಿಯಾಗಿ ಬಿಂಬಿಸುತ್ತದೆ.

ಪಿ.ಬಿ.ದುತ್ತರಗಿ ಅವರು ಈ ನಾಟಕದ ಮೂಲಕ ಪುರುಷ ಪ್ರಧಾನ ಸಮಾಜದ ದ್ವಂದ್ವ ನಿಲುವುಗಳನ್ನ ಬಯಲು ಮಾಡುತ್ತಾ ಸಾಗುತ್ತಾರೆ. ಅಂದರೆ ಗೌರವ ಮತ್ತು ಅಧಿಕಾರ ಅಂತ ಬಂದರೆ ಸಮಾಜವು ಮಹಿಳೆಯನ್ನು ತಾಯಿ ಎಂದು ಪೂಜಿಸುತ್ತದೆ. (ಆದರ್ಶೀಕರಣ) ಆದರೆ ಅದೇ ಸಮಯದಲ್ಲಿ ಮನೆಯ ನಿರ್ಧಾರಗಳನ್ನ ತೆಗೆದುಕೊಳ್ಳುವ ಅಧಿಕಾರವನ್ನು ಅವಳಿಗೆ ನೀಡಲು ಹಿಂಜರಿಯುತ್ತದೆ. ಯಾವಾಗ ಮಹಿಳೆಯು ತನ್ನ ಹಕ್ಕುಗಳಿಗಾಗಿ ಧ್ವನಿ ಎತ್ತುತ್ತಾಳೆಯೋ ಸಮಾಜದ ವಿಧಿಸಿದ ಚೌಕಟ್ಟನ್ನು ಮೀರಲು ಪ್ರಯತ್ನಿಸುತ್ತಾಳೆಯೋ ಆಗ ಅವಳನ್ನ ತಕ್ಷಣವೇ ಗಯ್ಯಾಳಿ ಅಥವಾ ಜಗಳಗಂಟಿ ಎಂದು ಕರೆಯಲಾಗುತ್ತದೆ. ಸೊಸೆಯ ಪಾತ್ರದ ಮೂಲಕ ಸ್ತ್ರೀ ಪಾತ್ರಗಳ ಉದ್ಧಟತನವನ್ನು ಗಯ್ಯಾಳಿತನ ಎಂದು ಬಿಂಬಿಸುವುದು, ಅದರ ಮೂಲಕ ಹಕ್ಕುಗಳನ್ನು ಹತ್ತಿಕ್ಕುವಿಕೆ, ವಾಸ್ತವದಲ್ಲಿ ಅಧಿಕಾರ ಚಲಾಯಿಸಲು ಬಯಸುವ ಪಿತೃ ಪ್ರಧಾನ ಮನಸ್ಸಿಗೆ ಎದುರಾದ ಸವಾಲಾಗಿರುತ್ತದೆ. ಪುರುಷ ಕೇಂದ್ರಿತ ಸಮಾಜವು ತನ್ನ ಅನುಕೂಲಕ್ಕೆ ತಕ್ಕಂತೆ ಹೆಣ್ಣಿನ ನಡವಳಿಕೆಯನ್ನು ವಿಶ್ಲೇಷಿಸುತ್ತದೆ. ಅವಳು ಮನೆಯ ಹಿರಿಯರ ಸೇವೆ ಮಾಡಿದರೆ ಸಾತ್ವಿಕಳು ಇಲ್ಲದಿದ್ದರೆ ಗಯ್ಯಾಳಿ. ಈ ವಿಭಜನೆಯು ಹೆಣ್ಣನ್ನು ನಿಯಂತ್ರಿಸುವ ಒಂದು ಸಾಮಾಜಿಕ ತಂತ್ರ ಎಂಬುದನ್ನು ನಾಟಕಕಾರರು ಸೊಸೆಯ ಪಾತ್ರದ ಮೂಲಕ ಸೂಚ್ಯವಾಗಿ ಓದುಗರ ಮುಂದಿಡುತ್ತಾರೆ.

ಮನೆಯಲ್ಲಿ ಹೆಣ್ಣು ಮಕ್ಕಳ ನಡುವೆ (ಅತ್ತೆ ಸೊಸೆ) ಸಂಘರ್ಷ ಉಂಟಾದಾಗ ಪುರುಷ ಪ್ರಧಾನ ಸಮಾಜವು ಅದನ್ನು ಕೇವಲ ಹೆಣ್ಣು ಹಾಗೆತನ ಎಂದು ನೋಡಿ ಸುಮ್ಮನಾಗುತ್ತದೆ ಆದರೆ ಆ ಸಂಘರ್ಷದ ಮೂಲಕವೂ ಅಧಿಕಾರ ಹಂಚಿಕೆಯ ಕೊರತೆ ಮತ್ತು ಸಾಮಾಜಿಕ ಒತ್ತಡವಾಗಿ ಇರುತ್ತದೆ ಎಂಬುದನ್ನು ದುತ್ತರಗಿ ಅವರು ನಾಟಕೀಯವಾಗಿ ವಿಶ್ಲೇಷಿಸಿದ್ದಾರೆ. ಮನೆಯಲ್ಲಿ ತನ್ನದೇ ಅಧಿಕಾರ ನಡೆಯಬೇಕು ಎಂಬ ಹಟ ಅಥವಾ ಸ್ವಾರ್ಥವು ಹೆಣ್ಣನ್ನ ಗಯ್ಯಾಳಿಯನ್ನಾಗಿ ಮಾಡುತ್ತದೆ ಹಿರಿಯರ ಮಾತಿಗೆ ಬೆಲೆ ಕೊಡದೆ ಕಟುವಾದ ಮಾತುಗಳಿಂದ ಮನೆಯ ಶಾಂತಿಯನ್ನ ಕದಡುವ ಪಾತ್ರವಾಗಿ ಸೊಸೆಯ ಪಾತ್ರ ನಿಲ್ಲುತ್ತದೆ. ಈ ಪಾತ್ರದ ಮೂಲಕ ಅವರು ಗಯ್ಯಾಳಿತನವನ್ನು ಕೇವಲ ಸ್ವಭಾವವಾಗಿ ಚಿತ್ರಿಸದೆ ಆಧುನಿಕ ಜೀವನ ಶೈಲಿಯ ಮತ್ತು ಬದಲಾಗುತ್ತಿರುವ ಮೌಲ್ಯಗಳ ಪರಿಣಾಮವಾಗಿಯೂ ತೋರಿಸಿದ್ದಾರೆ.

ಪಿ.ಬಿ.ದುತ್ತರಗಿ ಅವರು ಸಮಾಜ ಚಿತ್ರಿಸುವ ಸಹನಶೀಲತೆ ಮತ್ತು ಗಯ್ಯಾಳಿತನವನ್ನು ಪಕ್ಕದಲ್ಲಿ ಇರಿಸುವ ಮೂಲಕ ಬದುಕಿನ ವಾಸ್ತವವನ್ನು ತೆರೆದಿಟ್ಟಿದ್ದಾರೆ. ಪುರುಷ ಪ್ರಧಾನ ಸಮಾಜದ ಬಿಂಬವನ್ನ ಪ್ರತಿಬಿಂಬಿಸಿದ್ದಾರೆ. ತಾಯಿಯ ಶಾಂತ ಸ್ವಭಾವವು ಗಯ್ಯಾಳಿ ಪಾತ್ರಗಳ ಉದ್ಧಟತನವನ್ನು ಎದ್ದು ಕಾಣುವಂತೆ ಮಾಡುತ್ತಾರೆ. ಅಂತಿಮವಾಗಿ ಗಯ್ಯಾಳಿತನವು ತಾತ್ಕಾಲಿಕ ಗೆಲುವು ನೀಡಿದರೂ ಸಹನಶೀಲತೆಗೆ ಎಲ್ಲರ ಮನಸನ್ನು ಗೆಲ್ಲುತ್ತದೆ ಎಂಬುವುದು ಇಲ್ಲಿನ ಸಾರ. ಈ ಲೇಖಕರು ಎರಡು ದೃಷ್ಟಿಕೋನಗಳನ್ನ ಮೀರಿ ಕರುಳಿನ ಸಂಬಂಧವನ್ನು ಎತ್ತಿ ಹಿಡಿಯುತ್ತಾರೆ. ಸಮಾಜವು ಮಹಿಳೆಯನ್ನು ಎಷ್ಟೇ ವರ್ಗೀಕರಿಸಿದ್ದರೂ ಅವಳ ಮೂಲ ಗುಣವಾದ ಮಮತೆ ಮತ್ತು ಸಂಬಂಧಗಳನ್ನು ಬೆಸೆಯುವ ಶಕ್ತಿಯು ಪಿತೃ ಪ್ರಧಾನ ವ್ಯವಸ್ಥೆಯ ಕಠಿಣ ನಿಯಮಗಳಿಗಿಂತ ಮಿಗಿಲಾದುದು ಎಂಬುವುದು ಪಿ.ಬಿ. ದುತ್ತರಗಿ ಅವರ ವಿಚಾರವಾದಂತೆ ತೋರುತ್ತದೆ. ಮಹಿಳೆಯನ್ನು ಸಹನಶೀಲ ಮತ್ತು ಗಯ್ಯಾಳಿ ಎಂಬ ಸೀಮಿತ ಚೌಕಟ್ಟಿನಲ್ಲಿ ನೋಡುವ ಸಮಾಜಕ್ಕೆ ಕನ್ನಡಿ ಹಿಡಿದಿದ್ದಾರೆ. ಅವಳು ತನ್ನದೇ ಆದ ಅಸ್ತಿತ್ವ ಮತ್ತು ಭಾವನೆಗಳಿರುವ ಮನುಷ್ಯಳು ಎಂಬ ಸತ್ಯವನ್ನ ಲೇಖಕರು ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು:**


1. ರಂಗನಾಥ್ ಎಚ್. ಕೆ., (1982), ಕನ್ನಡ ರಂಗಭೂಮಿ: ಒಂದು ಅಧ್ಯಯನ, ಮೈಸೂರು: ಸುರುಚಿ ಪ್ರಕಾಶನ.
2. ವಿಜಯಾ ದಬ್ಬೆ, (1999), ಮಹಿಳಾ ಸಂವೇದನೆ ಮತ್ತು ಸಾಹಿತ್ಯ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
3. ಕೀರ್ತಿನಾಥ ಕುರ್ತಕೋಟಿ, (1994), ಕನ್ನಡ ನಾಟಕ ಪರಂಪರೆ, ಧಾರವಾಡ: ಮನೋಹರ ಗ್ರಂಥಮಾಲಾ.
4. ಸುಮಿತ್ರಾಬಾಯಿ ಬಿ. ಎನ್., (2010), ಸ್ತ್ರೀವಾದಿ ವಿಮರ್ಶೆ, ಬೆಂಗಳೂರು: ನವಕರ್ನಾಟಕ ಪ್ರಕಾಶನ.
5. ವಿಜಯಾ, (2004), ವೃತ್ತಿ ರಂಗಭೂಮಿ ಮತ್ತು ಮಹಿಳೆ, ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ.